ಆರಂಭದ ತರಬೇತಿಯ ದಿನಗಳಿಂದಲೂ ನಮ್ಮ ನಡುವೆ ಆಪ್ತ ಸಂಬಂಧ ಏರ್ಪಟ್ಟಿತ್ತು. ನಂತರದ ದಿನಗಳಲ್ಲಿ ನಾವು ಪರಸ್ಪರ ಸಂಧಿಸುತ್ತಿದ್ದುದು ಕಾರ್ಯಾಗಾರಗಳಲ್ಲಿ ಮತ್ತು ಮುಖ್ಯ ಕಚೇರಿಯ ಮೀಟಿಂಗ್‌ಗಳಲ್ಲಿ ಅಷ್ಟೆ. ಯಾವಾಗಲೋ ಒಮ್ಮೊಮ್ಮೆ ದೂರವಾಣಿಯಲ್ಲಿ. ಇಬ್ಬರೂ ಬೇರೆ ಬೇರೆ ಶಾಖೆಗಳಲ್ಲಿ ವ್ಯವಸ್ಥಾಪಕ ಹುದ್ದೆ ನಿರ್ವಹಿಸುತ್ತ ಬಂದವರು. ಕಳೆದ ವರ್ಗಾವಣೆಯಲ್ಲಿ ನಾನು ಮುಖ್ಯ ಕಚೇರಿಯ ತನಿಖಾ ವಿಭಾಗಕ್ಕೆ ಹೋದರೆ ಆತ ಇಲ್ಲಿಗೆ ವ್ಯವಸ್ಥಾಪಕನಾಗಿ ಬಂದಿದ್ದ. ವರ್ಗಾವಣೆ ಪಟ್ಟಿಯಲ್ಲಿ ಆತನ ಹೆಸರು ಕಂಡಿದ್ದಿರಬಹುದಾದರು ಮರೆತು ಹೋಗಿತ್ತು. ಇಲ್ಲಿ ಪ್ರತ್ಯಕ್ಷ ಕಂಡಾಗಲಷ್ಟೆ ಅದರ ನೆನಪು.

ಬಂದ ತಕ್ಷಣದಲ್ಲಿ ನಡೆಯಬೇಕಾದ ನಗದು ಶಿಲ್ಕುಗಳ ತಪಾಸಣೆಯ ನಂತರ ಬೇಕಾದ ಪುಸ್ತಕ, ದಾಖಲೆಗಳ ವಿವರವನ್ನು ಕೇಳುವುದರಲ್ಲಿ, ಸ್ಥೂಲವಾದ ವ್ಯವಸ್ಥಾ ತನಿಖೆಯಲ್ಲಿ ಆ ದಿನ ಕಳೆಯಿತು. ಸಿರಿಪುರದಲ್ಲಿ ಉಳಿಯಲು ಸೂಕ್ತ ವ್ಯವಸ್ಥೆ ಇಲ್ಲವೆಂಬ ಕಾರಣದಿಂದ ಹತ್ತಿರದ ಸಾಗರದಲ್ಲಿ ನನಗಾಗಿ ಏರ್ಪಡಿಸಿದ ವಸತಿ ಗೃಹದಲ್ಲಿ ನನ್ನನ್ನು ಬಿಟ್ಟು ಹೋಗಲು ರಾಗುವೇ ಬಂದ. ತನ್ನ ಮಿತ್ರನೇ ಶಾಖಾ ತನಿಖೆಗೆ ಬಂದಿರುವುದರಿಂದ ಉಂಟಾದ ಸಂತೋಷ ಆತನ ಮುಖದಲ್ಲಿ ವ್ಯಕ್ತವಾಗುತ್ತಿದ್ದರೂ ತನ್ನ ಶಾಖೆಯಲ್ಲಿ ಈತ ತಪ್ಪುಗಳನ್ನು ತೋರಿಸಿದರೆ ಅವಮಾನವನ್ನು, ಮುಜುಗರವನ್ನು ಎದುರಿಸಬೇಕಾಗುವುದಲ್ಲ ಎನ್ನುವ ಕಳವಳವೂ ಹಣೆಯಂಚಿನಲ್ಲಿ ನಿರಿಗೆಗಟ್ಟಿತ್ತು. ನಾನದನ್ನು ಗಮನಿಸದಿರಲಿಲ್ಲ. ಆದರೂ ಹೇಳಿದೆ: 'ನೀನು ಬಿಡಪ್ಪ, ಬುದ್ಧಿವಂತ. ಹೋದೆಲ್ಲ ಶಾಖೆಗಳಲ್ಲಿ ಆಡಿಟ್‌ನಲ್ಲಿ ಅತ್ಯುತ್ತಮ ಶ್ರೇಣಿಯನ್ನೇ ಪಡೆದಿದ್ದೀಯ, ಎಲ್ಲಾ ಚೆನ್ನಾಗಿಯೇ ಇಟ್ಟಿರುತ್ತೀಯ.'

'ಮತ್ತೆಲ್ಲ ಸರಿಯಿದೆ ಭಾರ್ಗವ. ವಹಿವಾಟನ್ನು ಒಂದು ವರ್ಷದಲ್ಲಿಯೇ ಶೇಕಡ 50 ರಷ್ಟು ಹೆಚ್ಚಿಸಿದ್ದೇನೆ. ಎನ್.ಪಿ.ಎ. (ನಿಷ್ಕ್ರಿಯ ಆಸ್ತಿ) ರಿಕವರಿ ಚೆನ್ನಾಗಿದೆ. ಆದರೆ ಒಂದು ಹೋಟೇಲ್ ಖಾತೆ ನನ್ನ ಕುತ್ತಿಗೆಗೆ ಬಂದಿದೆ. ಹಳಬರಿಂದ ಚಾರ್ಜ್ ತೆಗೆದುಕೊಳ್ಳುವಾಗ ನಾನು ಸ್ವಲ್ಪ ಎಡವಿದೆನೋ ಏನೋ. ನಾನು ಚಾರ್ಜ್ ತೆಗೆದುಕೊಂಡ ಒಂದೇ ತಿಂಗಳಲ್ಲಿ ಒಂದು ಖಾತೆಯ ದಾಖಲೆಯ ಊರ್ಜಿತ ಅವಧಿ ಮುಗಿದೇ ಹೋಯಿತು. ದಾಖಲೆ ಟೈಮ್‌ಬಾರ್ ಆಯಿತು. ಪರಿಣಾಮ ನಿನಗೆ ಗೊತ್ತಲ್ಲ... ಬಂದ ಹೊಸದರಲ್ಲಿ, ಉಳಿದ ಕಡೆಗೆಲ್ಲ ಸುಧಾರಣೆ ತರುವ ಒತ್ತಡದಲ್ಲಿ ಇದನ್ನು ನಾನು ಗಮನಿಸಲೇ ಇಲ್ಲ. ಆ ಖಾತೆ ಬಹಳ ಹಿಂದೆಯೇ ಟೈಮ್ ಬಾರ್ ಆಗಬಹುದಿತ್ತಾದರೂ ಹಳೆಯದೊಂದು ಪುನರುಜ್ಜೀವನ ಪತ್ರ ಅದನ್ನು ಒಂದಷ್ಟು ಕಾಲ ಬದುಕಿಸಿತ್ತು. ಹಾಗಾಗಿ ಹಿಂದಿನ ಮೆನೇಜರ್ ತಾನು ಬಚಾವಾಗಿಬಿಟ್ಟ. ಈಗ ನಾನು ಬಚಾವಾಗಬೇಕೆಂದರೆ ಖಾತೆದಾರನಿಂದ ಇನ್ನೊಂದು ಪುನರುಜ್ಜೀವನ ಪತ್ರ ತೆಗೆದುಕೊಳ್ಳಬೇಕು. ಹಾಗೆ ಮಾಡಿದ ಬಳಿಕ ಅದನ್ನು ರಿವ್ಯೂ ಮಾಡಿ ಕೋರ್ಟಿಗೆ ಹಾಕುವುದೋ ಮತ್ತೊಂದು ವ್ಯವಸ್ಥೆಯನ್ನೋ ಮಾಡಬಹುದು. ನಿಜವೆಂದರೆ ಖಾತೆದಾರ ನಿಜಕ್ಕೂ ದಿವಾಳಿ ಎದ್ದವನು. ವಸೂಲಾಗುವ ಸಾಧ್ಯತೆಯೇ ಇಲ್ಲ. ಅದನ್ನೇ ಹೇಳಿ ರಿವ್ಯೂ ಮಾಡೋಣವೆಂದರೆ ರಿವ್ಯೂನಲ್ಲಿ ದಾಖಲೆ ಅವಧಿ ಮೀರಿರುವುದನ್ನು ಹೇಳಲೇಬೇಕಾಗುತ್ತದೆ. ಹಾಗೆ ಮಾಡಿದರೆ ಅಲ್ಲಿಗೆ ಶುರು ಅಕೌಂಟಬಲಿಟಿ. ಅಲ್ಲಿಗೆ ನನ್ನ ಕೆರಿಯರ್ ಮುಗಿದ ಹಾಗೆ. ನಿನ್ನ ಕರ್ತವ್ಯವಾಗಿ ನೀನದನ್ನು ಕಾಣಿಸಿಯೇ ಕಾಣಿಸುತ್ತೀಯ, ನನಗೆ ಗೊತ್ತು... ಏನು ಮಾಡುವುದೋ ತಿಳಿಯುತ್ತಿಲ್ಲ...' ಆತ ಅವನತ ಮುಖಿಯಾದ.

'ಹೇಗಾದರು ಅವನಲ್ಲಿ ಪುನುರುಜ್ಜೀವನ ಪತ್ರಕ್ಕೆ ಸಹಿ ಹಾಕಿಸಿಕೊಂಡರಾಯಿತು' ನಾನೆಂದೆ.

'ಆ ಖಾತೆದಾರನ ತಲೆಯಲ್ಲಿ ಯಾರು ಏನು ತುಂಬಿದ್ದಾರೋ ಗೊತ್ತಿಲ್ಲ. ನಾನು ನಯವಾಗಿ ಹೇಳಿದೆ, ಬೆದರಿಸಿ ಹೇಳಿದೆ. ಹೇಗೆ ಹೇಳಿದರೂ ಆತ ಪುನರುಜ್ಜೀವನ ಪತ್ರಕ್ಕೆ ಸಹಿ ಹಾಕಲು